ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಸಿದ್ಧ ಆದ್ದು. [ನಂ. 39.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 8, ಸ॥ 1903.

IIನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ಮಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫಾರೆಸ್ಟ್ ಇಲಾಖೆ.

ಇಸ್ತಿಹಾರ್ನಾಮೆ.

ತಾರೀಖು ನೆ ಮಾಹೆ ಸೆಪ್ಟಂಬರ್ 1903ನೆ ಇಸವಿ, ಹಾಸನ ಡಿಸ್ಟ್ರಿಕ್ಟು.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ :—ಹಾಸನ ಡಿಸ್ಟ್ರಿಕ್ಟು ಆರಸೀಕೆರೆ ತಾಲ್ಲೂಕು ವಿನಹಾ ಬಾಕೀ ಎಲ್ಲಾ ತಾಲ್ಲೂಕುಗಳ ಸ್ಟೇಟ್ ಫಾರೆಸ್ಟ್ ಡಿಸ್ಟ್ರಿಕ್ಟು ಜಂಗಲುಗಳು ಮತ್ತು ಎಲ್ಲಾ ಸರ್ಕಾರೀ ಬಂಜರು ಜಮೀನುಗಳಲ್ಲಿ ದೊರಿಯುವ ಫಾರೆಸ್ಟ್ ಪಸಾರೆ ಜೀನಸಿಗಳನ್ನು 1903—04ನೆ ಸಾಲಿಗೆ ಜಮಾಯಿಸಿ ತೆಗದುಕೊಂಡು ಹೋಗುವ ಹಕ್ಕನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಬಳಸಟ್ಟು ಬಹಿರಂಗವಾಗಿ ತಾಲ್ಲೂಕುವಾರಾಗಿ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಅಥವಾ ರೇಂಜಾಫೀಸರವರು ಮತ್ತು ಆಯಾಯ ತಾಲ್ಲೂಕು ಅಮಲ್ದಾರ್‌ರವರೊಂದಿಗೆ ಈ ಕೆಳಗೆ ವಿವರಿಸಿರುವ ವೇರೆ ಆಯಾಯ ತಾಲ್ಲೂಕು ಹೆಡ್ ಕ್ವಾರ್ಟರಿನಲ್ಲಿ ಹರಾಜ್ ಮಾಡಿಸಲಾಗುತ್ತೆ.

ತಾಲ್ಲೂಕು.	ಹರಾಜು ತಾರೀಖು.
1. ಮಂಜರಾಬಾದ್	26—10—03.
2. ಬೇಲೂರು	27—10—03.
3. ಹಾಸನ—ಆಲೂರು ಸಬ್ ತಾಲ್ಲೂಕು ಜೇವೀಲ್ ..	28—10—03.
4. ಹೊಳೇನರಸೀಪುರ	29—10—03.
5. ಅರ್ಕಲಗೂಡು	30—10—03.
6. ಚನ್ನರಾಯಪಟ್ಟಣ	31—10—03.

2. ಛಡ ದರಖಾಸ್ತುದಾರನು ಹರಾಜ್ ಖೈದಾದ ಕೂಡ್ಲೆಯೇ ಹರಾಜ್ ಮೊಬಲಗಿನ ಕಾಲು ಹಿಸ್ಸೆ ಮೊಬಲಗನ್ನು ತೇವಣಿ ಯಾಗಿ ಹಾಜರ್ಮಾಡಬೇಕು. ಅಲ್ಲದೆ ಬಾಕೀ ವುಳಿಯುವ ಮೊಬಲಗಿಗೆ ಸಾಕಾದ ಖಾತ್ರೀ ಜಾಮೀನನ್ನು ಕೊಡಬೇಕು. ಹಾಗೆ ಮಾಡಲು ತಪ್ಪಿದಲ್ಲಿ ಡಿಪಾಜಿಟ್ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಬಾಬು ಪುನಹಾ ಹರಾಜ್ ಮಾಡಲ್ಪಡುವದು. ಮೇಲ್ಕಂಡಂತೆ ನಡೆಸುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಅವಲ್ ಛಡ ದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿಗೆ ಅವಲ್ ಛಡ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲಾ.

3. ಹರಾಜ್ ಖೈದಾದ ತರುವಾಯ ಆಖೈರ್ ಸವಾಲ್‌ದಾರನು ಹರಾಜ್ ಮೊಬಲಗು ಪೈಕಿ ವುಳಿದ ಮೂರು ಪಾಲು ಹಿಸ್ಸೇ ಮೊಬಲಗನ್ನು 1903ನೆ ಇಸವಿ ನವಂಬರ್ 15ನೆ ತಾರೀಖು ಲಾಗಾಯಿತು ನಾಲ್ಕು ತಿಂಗಳುಗಳಲ್ಲಿ ಅಂದರೆ ನಾಲ್ಕು ಕಂತಿನಲ್ಲಿ ಸಾವ ತೀ ಮಾಡಬೇಕು. ಅಲ್ಲದೇ 1903ನೆ ನವಂಬರು 10ನೆ ತಾರೀಖಿನಲ್ಲಿ ಮೇಲ್ಕಂಡಂತೆ ಒಪ್ಪಿ ನಡೆಯುವದಾಗಿ ಬಂದು ಷರತ್ತು ಬರೆದುಕೊಡಬೇಕು. ಯಾವ ಕಂತನ್ನಾಗಲೀ ಸಕಾಲಕ್ಕೆ ಕೊಡದೇ ತಪ್ಪಿದಲ್ಲಿ ಸಾಲಿಯಾನಾ ಶೇಕಡಾ 6 ಆರು ರೂಪಾಯಿನಂತೆ ಬಡ್ಡೀ ಠರಾಯಿಸಲ್ಪಡುತ್ತೆ.

4. ಹರಾಜ್ ಮೊಬಲಗಿಗೆ ರೂಪಾಯಿಗೆ ಬಂದಾಣೆಯಂತೆ ಲೋಕಲ್ ಸೆಸ್ ದಾಖಲ್ಮಾಡಲಾಗುತ್ತೆ. ಮೇಲ್ಕಂಡಂತೆ ಯಾವ ದೊಂದು ಕಂತನ್ನಾಗಲೀ ಕೊಡುವದರಲ್ಲಿ ತಪ್ಪಿದಾಗ್ಯೂ ಅಥವಾ ಸಾವಕಾಶವಾದಾಗ್ಯೂ ಡಿಪಾಜಿಟ್ ಮೊಬಲಗನ್ನು ಸರ್ಕಾರಕ್ಕೆ ದಂಡ ವಾಗಿ ಸೇರಿಸಿಕೊಳ್ಳುವದರಲ್ಲಿ ಬರುತ್ತೆಯಲ್ಲದೆ ಬಾಕೀ ವುಳಿದ ಮೊಬಲಗನ್ನು ರೆವಿನ್ಯೂ ಕಂದಾಯದ ಬಾಕೀಯಂತೆ ಹರಾಜ್‌ದಾರ ನಿಂದ ವಸೂಲ್ಮಾಡಲ್ಪಡುತ್ತೆ. ಈರೀತಿ ವಸೂಲಿಗೆ ಅಭ್ಯಂತರವಾದಲ್ಲಿ ಜಾಮೀರ್‌ದಾರನಿಂದ ವಸೂಲ್ಮಾಡಲ್ಪಡುತ್ತೆ.

5. ಕಂಟ್ರಾಕ್ಟುದಾರನು ಇನಾಂದಾರುಗಳಿಗೆ ಇರುವ ಯಾವದೊಂದು ಹಕ್ಕಿಗೂ ಕುಂದಕ ಉಂಟುಮಾಡಕೂಡದು.

6. (*a*) ಹರಾಜ್ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ನಡೆಸಲ್ಪಡುತ್ತೆ.

(*b*) ಎಲ್ಲಾ ಜಿನಸಿಗಳಾಗಲೀ ಅಥವಾ ಯಾವದಾದರೂ ಬಂದಕ್ಕಾಗಲೀ ಜಂಗಲುವಾರ್ ಅಥವಾ ಹೋಬಳೀವಾರ್ ಗುತ್ತಿಗೇ ಕೊಡುವದಕ್ಕೆ ಸಾಕಾದಷ್ಟು ಮುಖ್ಯವಾದ ಕಾರಣವಿದ್ದ ವಿನಹಾ ತಾಲ್ಲೂಕುವಾರುಗಿಯೇ ಗುತ್ತಿಗ್ಯೆ ಕೊಡಲಾಗುತ್ತೆ.

ಡೆಪ್ಯೂಟಿ ಕವಿಾಷನರ ಸಾಹೇಬರವರ ಅಪ್ಪಣೆ ಶಿವಾಯಿ ಇದರ ಹಕ್ಕನ್ನು ಒಟ್ಟು ಗುತ್ತಿಗೇದಾರು ಇತರರಿಗೆ ಕೊಡ ಕೂಡದು.

(*c*) ಜಮಾವಣೆ ಕೆಲಸದಲ್ಲಿ ಏಜೆಂಟರು ಅಥವಾ ನೌಕರರು ನಡಿಸುವ ಕೃತ್ಯಗಳಿಗೆ ಇಜಾರೇದಾರುಗಲಿ ಅಥವಾ ಸಬ್ ಇಜಾರೇದಾರೆ ಆಗಲೀ ಖುದ್ದು ಜವಾಬ್ದಾರನಾಗಿರುತ್ತಾನೆ.

7. ಹರಾಜನ್ನು ಯಾವದೊಂದು ಕಾರಣವೂ ನಮೂದಿಸದೆ ಮುಂಜೂರ್ಮಾಡುವ ಅಥವಾ ತಿರಸ್ಕರಿಸುವ ಬಗ್ಯೆ ಡೆಪ್ಯೂಟಿ ಕವಿಾಷನರ ಸಾಹೇಬರವರು ಸ್ವತಂತ್ರರಾಗಿರುತ್ತಾರೆ. 1903ನೆ ಅಕ್ಟೋಬರ್ ಮಾಹೆಯಲ್ಲಿ ಹರಾಜ್ ಆಗತಕ್ಕ ಹಾಸನ ಡಿಸ್ಟ್ರಿಕ್ಟಿನ ಪಸಾರೆ ಜಿನಸಿಗಳ ಪಟ್ಟಿಯನ್ನು ಈ ಕೆಳಗೆ ಕಾಣಿಸಿರುತ್ತೆ.

ಪಸಾರೆ ಜಿನಸಿಗಳ ಹೆಸರು.

ಸಂಖ್ಯೆ.	ಜಿನಸಿಗಳ ಹೆಸರು.	ಸಂಖ್ಯೆ.	ಜಿನಸಿಗಳ ಹೆಸರು.
1	ಜೇನುಮೇಣ	14	ಹುರುಗಲುಬೀಜಾ
2	ಅಳಲೇಕಾಯಿ	15	ಬೇಲದಹಣ್ಣು
3	ಸೀಗೇಕಾಯಿ	16	ವಾಟೇಹುಳಿ
4	ಗೇರುಬೀಜಾ	17	ದಾಲಚಿನ್ನಿ
5	ಗೋಂದು	18	ಬಂಡೇಸಾರು
6	ಹೊಂಗೇಬೀಜಾ	19	ಕಾಡುಹಿಪ್ಪೇಬೀಜಾ
7	ಕಾಡಜಗ್ಗಿಬೀಜಾ	20	ಬೂರಗದಹತ್ತಿ
8	ಅಂಟುವಾಳದಕಾಯಿ	21	ತಾರೇಕಾಯಿ
9	ಕಕ್ಕೇಕಾಯಿ	22	ಕೆರಯಿಾಚಲು
10	ಗುರ್ಗಹರಳು	23	ಪಂಡು
11	ಕಾಡಹರಳು	24	ಬಳಾಪಿನಕಲ್ಲು
12	ನಸಾಣಿಮೊಗ್ಗು	25	ರಾಮಪತ್ರೆ–ಕಾರ್ಪತ್ರೆ
13	ಹಾಲಮಡ್ಡಿ		

ವೈ. ಶೇತಾರಾಮಯ್ಯ,
ಫಾರ್ ಡೆಪ್ಯೂಟಿ ಕವಿಾಷನರ್, ಹಾಸನದ ಡಿಸ್ಟ್ರಿಕ್ಟ್.

ತಾರೀಖು 17ನೆ ಸೆಪ್ಟಂಬರ್ 1903.

1900ನೆ ಇಸವಿ XIನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇಷನ್ 17ನೆ ಸೆಕ್ಷನಿನ ವಿಧಿಗಳನುಸರಿಸಿ ಈ ಇಸ್ತಿಹಾರಿಗೆ ಜಂಟಿಸಿ ಇರುವ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಚಕ್ಕುಬಂದಿಯುಳ್ಳ ಪ್ರದೇಶ ೨ 1903ನೆ ಸೆಪ್ಟಂಬರ್ ಗುರ್ವಾ ಲಾಗಾಯತು ಈ ಇಸ್ತಿಹಾರಿನ ಆಡೀಲಿ ವಿವರಿಸಿ ಇರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು ಸ್ಟೇಟ್ ಫಾರೆಸ್ಟ್ ಆಗಿರುತ್ತದೆ.

ಷೆಡ್ಯೂಲ್.

ತಾಲ್ಲೂಕು.	ತಾಲ್ಲೂಕಿನ ಹೋಬಳಿ ಅಥವಾ ಪೇಟೆ.	ಸರ್ವೆ ನಂಬರು ಅಥವಾ ಸ್ಕೀಂ.	ಬ್ಲಾಕಿನ ಹೆಸರು.	ಚಕ್ಕುಬಂದಿ.
ಚಿತ್ರದುರ್ಗ.	ಹೊಳಲ್ಕೆರೆ ತಾಲ್ಲೂಕು.	13½ ಜರದ ನೆಪ್ಪಿ.	ಗರ್ಗಾ ಕಾವಲು.	ಉತ್ತರಕ್ಕೆ.—ಗರ್ಗಾ ಗ್ರಾಮದ ಸರ್ವೆ ನಂ. 1ರ ನೈರುತ್ಯ ಮೂಲೆಯಿಂದ ಹೊರಟು ಲೈನು ಸವರೀ ಗ್ರಾಮದ ಸರ್ವೆ ನಂ. 1, 2, 12 ಪ 13 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ ಸರ್ವೆ ನಂಬರಿನ ಆಗ್ನೇಯ ಮೂಲಗೆ ಹೋಗುತ್ತದೆ. ಪೂರ್ವಕ್ಕೆ.—ತರುವಾಯ ಗರ್ಗದ ಸರ್ವೆ ನಂ. 16, ಗಿಲ್ಕೀನಹಳ್ಳಿಯ ಸರ್ವೆ ನಂ. 44, 43 ಪ 42 ಮತ್ತು ಹಳೇಹಳ್ಳಿಯ ಸರ್ವೆ ನಂ. 41 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಅದರ ಕೇವಲ ದಕ್ಷಿಣ ಮೂಲೆಗೆ ಹೋಗುತ್ತದೆ. ಆಮೇಲೆ ಹಳೇಹಳ್ಳಿಯ ಸರ್ವೆ ನಂ. 59ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಹೊಳಲಕೆರೆಯ ಸರ್ವೆ ನಂ. 276ರ ಈಶಾನ್ಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ದಕ್ಷಿಣಕ್ಕೆ.—ತರುವಾಯ ಹೊಳಲಕೆರೆಯ ಸರ್ವೆ ನಂ. 276ರ ಉತ್ತರ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 274ರ ಆಗ್ನೇಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಪಶ್ಚಿಮಕ್ಕೆ.—ಆಮೇಲೆ ಹೊಳಲಕೆರೆಯ ಸರ್ವೆ ನಂ. 274 ಪ 273, ಚೀರನಹಳ್ಳಿಯ ಸರ್ವೆ ನಂ. 27, ಜೆಟ್ಟಿಹಳ್ಳಿಯ ಸರ್ವೆ ನಂ. 12 ಮತ್ತು ಹಾರೇನಹಳ್ಳಿಯ ಸರ್ವೆ ನಂ. 30 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

ಪರಾ. ಎ.—ಹಾದಿಯು ಇದರಡೀ ಕಂಡ ಹಕ್ಕುಗಳು ಬ್ಲಾಕಿನಲ್ಲಿ ಹಂಗಾಮಿಯಾಗಿ ಕೊಡಲ್ಪಟ್ಟಿರುತ್ತವೆ:—

(1) ಹೊಳಲಕೆರೆ ಮತ್ತು ಹಳೇಹಳ್ಳಿ ಗ್ರಾಮಗಳಿಂದ ಗರ್ಗಾ ಕಾವಲಿನ ಸರ್ವೆ ನಂ. 1ರ ಆಗ್ನೇಯ ಮೂಲೆಯಲ್ಲಿರುವ ಆಂಜನೇಯ ದೇವಸ್ಥಾನದವರೆವಿಗೆ ಸುಮಾರು ಫರ್ಲಾಂಗಿನ ಉದ್ದವಾದ ಮತ್ತು 8 ಅಡಿಗಳ ಅಗಲವುಳ್ಳ ಕಾಲಹಾದಿಯು ಜನಗಳಿಗೂ ವ ದನಗಳಿಗೂ ಬಿಟ್ಟಿರುತ್ತದೆ. ಈ ಹಾದಿಯು ಸ್ಟೇಟ್ ಫಾರೆಸ್ಟನ್ನು ಹೊಳಲಕೆರೆಯ ಸರ್ವೆ ನಂ. 276ರ ಈಶಾನ್ಯ ಮೂಲೆಯ ಬಾಂದಿನಿಂದ ಸುಮಾರು 100 ಗಜಗಳ ಫಾಸಲೆಯಲ್ಲಿ ಪ್ರವೇಶಿಸಿ ಹೊಳಲಕೆರೆಯ ಸರ್ವೆ ನಂ. 276ರ ಈಶಾನ್ಯ ಮೂಲೆಯಿಂದಉತ್ತರಕ್ಕೆ ಸುಮಾರು 50 ಗಜಗಳ ಫಾಸಲೆಯಲ್ಲಿ ಹಳೇಹಳ್ಳಿಯ ಸರ್ವೆ ನಂ. 59ರ ಪಶ್ಚಿಮ ಪಾರ್ಶ್ವದಲ್ಲಿ ಸ್ಟೇಟ್ ಫಾರೆಸ್ಟನ್ನು ಬಿಡುತ್ತದೆ.

(2) ಗಿಲ್ಕೀನ ಹಳ್ಳಿಯಿಂದ ಆರ್ಸಿಫಟ್ಟುವ ವರಿವಿಗೆ 12 ಅಡಿಗಳ ಅಗಲವುಳ್ಳ ಭಂಡಿ ಜಾಡು ಜನಗಳಿಗೂ, ದನಗಳಿಗೂ ಮತ್ತು ಭಂಡಿಗಳಿಗೂ ಬಿಟ್ಟಿರುತ್ತೆ. ಈ ಭಂಡಿ ಜಾಡು ಗಿಲ್ಕೀನಹಳ್ಳಿಯ ಸರ್ವೆ ನಂ. 44ರ ಪಶ್ಚಿಮ ಪಾರ್ಶ್ವದಲ್ಲಿ ಅದರ ಈಶಾನ್ಯ ಮೂಲೆಯಿಂದ ಸುಮಾರು 3½ ಫರ್ಲಾಂಗುಗಳ ಫಾಸಲೆಯಲ್ಲಿ ಫಾರೆಸ್ಟನ್ನು ಪ್ರವೇಶಿಸಿ ವಾಯುವ್ಯ ದಿಕ್ಕಾಗಿ ಸುಮಾರು ಅರ್ಧಮೈಲಿ ದೂರ ಹೋಗಿ ಗರ್ಗಾ ಗ್ರಾಮದ ಸರ್ವೆ ನಂ. 12ರ ನೈರುತ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(3) ಗಿಲ್ಕೀನಹಳ್ಳಿಯಿಂದ ಹಾರೇನಹಳ್ಳಿ ವರಿವಿಗೆ 12 ಅಡಿ ಅಗಲವುಳ್ಳ ಭಂಡಿ ಜಾಡು ಜನಗಳಿಗೂ, ದನಗಳಿಗೂ ಮತ್ತು ಭಂಡಿಗಳಿಗೂ ಬಿಟ್ಟಿರುತ್ತೆ. ಈ ಭಂಡಿ ಜಾಡು ಸ್ಟೇಟ್ ಫಾರೆಸ್ಟನ್ನು ಗಿಲ್ಕೀನಹಳ್ಳಿಯ ಸರ್ವೆ ನಂ. 43ರ ಪಶ್ಚಿಮ ಪಾರ್ಶ್ವದಲ್ಲಿ ಅದರ ವಾಯುವ್ಯ ಮೂಲೆಯಿಂದ ಸುಮಾರು 150 ಗಜಗಳ ಫಾಸಲೆಯಲ್ಲಿ ಪ್ರವೇಶಿಸಿ ಪಶ್ಚಿಮ ದಿಕ್ಕಾಗಿಯೂ ವಾಯುವ್ಯ ದಿಕ್ಕಾಗಿಯೂ ಸುಮಾರು 1 ಮೈಲಿ ಹೋಗಿ ಹಾರೇನಹಳ್ಳಿಯ ಸರ್ವೆ ನಂ. 30ರ ಪೂರ್ವ ಪಾರ್ಶ್ವದಲ್ಲಿ ಅದರ ಆಗ್ನೇಯ ಮೂಲೆಯಿಂದ ಸುಮಾರು 200 ಗಜಗಳ ಫಾಸಲೆಯಲ್ಲಿ ಸ್ಟೇಟ್ ಫಾರೆಸ್ಟನ್ನು ಬಿಡುತ್ತದೆ.

(4) ಗಿಲ್ಕೀನಹಳ್ಳಿಯಿಂದ ಚೀರನಹಳ್ಳಿ ವರಿವಿಗೆ 6 ಅಡಿಗಳ ಅಗಲವುಳ್ಳ ಕಾಲಹಾದಿಯು ಜನಗಳಿಗೂ ಮತ್ತು ದನಗಳಿಗೂ ಬಿಟ್ಟಿರುತ್ತೆ. ಈ ಹಾದಿಯು ಫಾರೆಸ್ಟನ್ನು ಗಿಲ್ಕೀನಹಳ್ಳಿಯ ಸರ್ವೆ ನಂ. 42ರ ಪಶ್ಚಿಮ ಪಾರ್ಶ್ವದಲ್ಲಿ ಅದರ ವಾಯುವ್ಯ ಮೂಲೆಯ ಬಾಂದಿನಿಂದ ಸುಮಾರು 100 ಗಜಗಳ ಫಾಸಲೆಯಲ್ಲಿ ಪ್ರವೇಶಿಸಿ ಪಶ್ಚಿಮ ದಿಕ್ಕಾಗಿ ಸುಮಾರು 1 ಮೈಲಿ ದೂರ ಹೋಗಿ ಚೀರ್ನಹಳ್ಳಿಯ ಸರ್ವೆ ನಂ. 27ರ ಆಗ್ನೇಯ ಮೂಲೆಯಿಂದ ಸುಮಾರು 2 ಫರ್ಲಾಂಗುಗಳ ಫಾಸಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

ಬಿ. ಇದರಡೀ ಕಂಡ ಹಕ್ಕುಗಳು ಬ್ಲಾಕಿನಲ್ಲಿ ಕೊಡಲ್ಪಟ್ಟಿರುತ್ತವೆ:—

ಗರ್ಗಾ ಕಾವಲಿನ ಸರ್ವೆ ನಂ. 1ರ ಆಗ್ನೇಯ ಮೂಲೆಯಲ್ಲಿರುವ ಆಂಜನೇಯ ದೇವಸ್ಥಾನದ ಸಮೀಪದಲ್ಲಿ 1½ ಎಕರೆ ಪುಳ್ಳ ದಂಡು ಇಳೆಯುವ ಭೂಮಿಯು ಬಿಡಲ್ಪಟ್ಟು ಆವರ್ಣವಾಗಿ ಎಣಿಸಲ್ಪಟ್ಟಿರುತ್ತದೆ.

ಹೆಚ್. ರಾಮಾನುಜೈಯ್ಯಂಗಾರ್,
ಡೆಪ್ಯೂಟಿ ಕಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟ್.

ಅಬಸ್ಟ್ರಾಕ್ಟ್.

ಇಸ್ತಿಹಾರ್ನಾಮೆ, ತಾರೀಖು 3ನೆ ಸೆಪ್ಟಂಬರ್ 1903ನೆ ಇಸವಿ.

ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಜೋಡಿ ಗ್ರಾಮಗಳು, ಸರ್ತಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ, ಆಯಾಯ ತಾ॥ ಅಮಲ್ದಾರ್ರುಗಳ ಕಛೇರಿಯಲ್ಲಿ, 1903ನೆ ಅಕ್ಟೋಬರ್ ಮಾಹೆ 16ನೆ ತಾ॥ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

1. ಕೋಲಾರ ತಾ॥ ಕಸಬಾ ಹೋಬಳಿ ಜೋಡಿ ಕೋಡರಾಜನಹಳ್ಳಿ ಗ್ರಾಮ.
2. ಚಿಕ್ಕಬಳ್ಳಾಪುರದ ತಾ॥ ಮಂಡಿಕಲ್ಲು ಹೋಬಳಿ ಜೋಡಿ ಪಾರೇನಹಳ್ಳಿ ಗ್ರಾಮ.

(ಹೆಚ್ಚು ತಪಶೀಲ್ ಬಗ್ಯೆ 24ನೆ ಮುಕ್ತಂ 38ನೆ ನಂಬರ್ ಮೈಸೂರ ಗೆಜೆಟಿನ 2ನೆ ಭಾಗದ 498—497ನೆ ನಂಬರ್ ಪೇಜು ನೋಡತಕ್ಕದ್ದು.)

ಇಸ್ತಿಹಾರ್ನಾಮೆ, ತಾರೀಖು 10ನೆ ಸೆಪ್ಟಂಬರ್ 1903ನೆ ಇಸವಿ.

ಕೋಲಾರ ತಾ॥ ವೇಮಗಲ್ ಹೋಬಳೀಗೆ ಸೇರಿದ ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು, ಸರ್ತಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ, ಆ ತಾ॥ ಅಮಲ್ದಾರ್ರ ಕಛೇರಿಯಲ್ಲಿ 1903ನೆ ನವಂಬರ್ ಮಾಹೆ 5ನೆ ತಾ॥ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

1. ಖಾಯಂಗುತ್ತಾ ಅಡಿಕೆತೋಟ.
2. ಜೋಡಿ ಚಂದ್ರಶೇಖರ ಪುರ.
3. ಖಾಯಂಗುತ್ತಾ ವೀರೇನಹಳ್ಳಿ.
4. ಜೋಡಿ ಜಂಬಾಪುರ.
5. ಖಾಯಂಗುತ್ತಾ ಮೇಡಿಹಾಳ.

(ಹೆಚ್ಚು ತಪಶೀಲ್ ಬಗ್ಯೆ 24ನೆ ಮುಕ್ತಂ 38ನೆ ನಂಬರ್ ಮೈಸೂರ ಗೆಜೆಟಿನ 2ನೆ ಭಾಗದ 501—499—502—500—503ನೆ ನಂಬರ್ ಪೇಜು ನೋಡತಕ್ಕದ್ದು.

ಇಸ್ತಿಹಾರ್ನಾಮೆ, ತಾರೀಖು 15ನೆ ಸೆಪ್ಟಂಬರ್ 1903ನೆ ಇಸವಿ.

ಮಾರ್ಜಿನ್ನಲ್ಲಿ ನಮೂದಾಗಿ ಇರತಕ್ಕ ಇನಾಂ ಗ್ರಾಮಗಳು, ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ, ಆಯಾಯ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ, 1903ನೆ ಇಸವಿ ನವಂಬರ್ ಮಾಹೆ 6ನೆ ತಾ॥ ದಿವಸ ಬಹಿರಂಗವಾಗಿ ಹರಾಜ್ ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

1. ಕೋಲಾರ ತಾ॥ ಸುಗಟೂರು ಹೋಬಳಿ ಜೋಡಿ ಸೋಮಾಂಬುಧಿ ಅಗ್ರಹಾರ.
2. ಮಾಲೂರು ತಾ॥ ಕಸಬಾ ಹೋಬಳಿ ಜೋಡಿ ಕಾಡುಸೊಂಪೇನಹಳ್ಳಿ.
3. ಮಾಲೂರು ತಾ॥ ತ್ಯಾಕಲ್ಲು ಹೋಬಳಿ ಖಾಯಂಗುತ್ತಾ ಬುವನಹಳ್ಳಿ.

(ಹೆಚ್ಚು ತಪಶೀಲ್ ಬಗ್ಯೆ 24ನೆ ಮುಕ್ತಂ 38ನೆ ನಂಬರ್ ಮೈಸೂರ ಗೆಜೆಟಿನ 2ನೆ ಭಾಗದ 504—505—506ನೆ ನಂಬರ್ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜ್ರವರ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೆ ಇಸವಿ ಅರ್ಜೀ ನಂಬರ್, 68.

ಮೃತಪಟ್ಟ ಬಸಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ದೊಡ್ಡಬಳ್ಳಾಪುರದ ತಾಲ್ಲೂಕು ಮೆಳಕೋಟೆಲಿರುವ ಪುಟ್ಟಮ್ಮ, ಮೃತಪಟ್ಟ ಸದರೀ ಬಸಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ದೊಡ್ಡಬಳ್ಳಾಪುರ ತಾಲ್ಲೂಕು ಮೆಳಕೋಟೆಲಿ ವಾಸಸ್ಥರಾಗಿ ಮೃತಪಟ್ಟ ಬಸಪ್ಪನವರ ಜೀಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರ್ರಾದ ಪುಟ್ಟಮ್ಮನೆಂಬುವರ ಅರ್ಜಿಯನ್ನು ಸ್ ೧೯೦೩ನೆ ಇಸವಿ ನವಂಬರು ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಸಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೆ ಇಸವಿ ಸೆಪ್ಟಂಬರು ತಿಂಗಳು 24ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.